## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಮಾನ್ಯ ಸದಸ್ಯರ ಹೆಸರು** | : | **ಶ್ರೀ ಐವನ್ ಡಿ ಸೋಜಾ** |
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:** | : | **1034(1274)** |
| **ಉತ್ತರಿಸುವ ದಿನಾಂಕ** | : | **13.03.2026** |
| **ಉತ್ತರಿಸುವ ಸಚಿವರು** | : | **ಮಾನ್ಯ ಕಾರ್ಮಿಕ ಸಚಿವರು** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕರಾವಳಿ ಜಿಲ್ಲೆಗಳಲ್ಲಿ ಬೀಡಿ ಕಾರ್ಮಿಕರಿಗೆ ಪಾವತಿಸಲು ಬಾಕಿ ಇರುವ ಡಿ.ಎ ನ್ನು ನೀಡಲು ಸರ್ಕಾರ ಕ್ರಮಕೈಗೊಂಡಿದೆಯೇ; (ವಿವರ ನೀಡುವುದು) | "ಬೀಡಿ ತಯಾರಿಕೆ" ಉದ್ದಿಮೆಯ ಕಾರ್ಮಿಕರಿಗೆ 2015-16 ನೇ ಸಾಲಿನಲ್ಲಿ ಪಾವತಿ ಮಾಡಬೇಕಾದ ವಿ.ಡಿ.ಎ ಪಾವತಿಸುವುದರಿಂದ ವಿನಾಯಿತಿ ನೀಡಿ ದಿನಾಂಕ: 08-04-2015 ರಂದು ಅಧಿಸೂಚನೆ ಹೊರಡಿಸಲಾಗಿತ್ತು.<br><br>ಸರ್ಕಾರದ ಈ ಆದೇಶವನ್ನು ಕಾರ್ಮಿಕ ಸಂಘಗಳು ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದು, ಮಾನ್ಯ ನ್ಯಾಯಾಲಯದ ತೀರ್ಪಿನ ಮೇರೆಗೆ ಸರ್ಕಾರವು ಸದರಿ ಅಧಿಸೂಚನೆಯನ್ನು ದಿನಾಂಕ: 02-01-2017 ಮುಖಾಂತರ ಹಿಂಪಡೆದಿರುತ್ತದೆ.<br><br>ಏತನ್ಮಧ್ಯೆ, ತುಟ್ಟಿಭತ್ಯೆ ಪಾವತಿಸುವುದರಿಂದ ವಿನಾಯಿತಿ ನೀಡಿ ಹೊರಡಿಸಿದ್ದ ಆದೇಶವನ್ನು ಹಿಂಪಡೆದು ಸರ್ಕಾರವು ಹೊರಡಿಸಿದ್ದ ದಿನಾಂಕ: 02-01-2017 ರ ಅಧಿಸೂಚನೆಯನ್ನು ಮೆ: ಮಂಗಳೂರು ಗಣೇಶ ಬೀಡಿ ವರ್ಕ್ಸ್, ಮೈಸೂರು, ಇವರು ರಿಟ್ ಅರ್ಜಿ ಸಂಖ್ಯೆ: 11800/2019 ರಲ್ಲಿ ಪ್ರಶ್ನಿಸಿದ್ದು, ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾನ್ಯ ಉಚ್ಚ ನ್ಯಾಯಾಲಯವು ದಿನಾಂಕ: 23-02-2023 ರಂದು ಹೊರಡಿಸಿರುವ ತೀರ್ಪಿನಲ್ಲಿ 2015-16 ನೇ ಸಾಲಿನ ತುಟ್ಟಿ ಭತ್ಯೆ ಪಾವತಿಗೆ ವಿನಾಯಿತಿ ನೀಡಿ, ಹೊರಡಿಸಿದ್ದ ಅಧಿಸೂಚನೆಯನ್ನು ಹಿಂಪಡೆದಿರುವ ಕ್ರಮ ಸೂಕ್ತವಾಗಿರುತ್ತದೆ ಎಂದು ತಿಳಿಸಿರುತ್ತದೆ.<br><br>ಗೌರವಾನ್ವಿತ ನ್ಯಾಯಾಲಯದ ತೀರ್ಪಿನ ಮೇರೆಗೆ ಬೀಡಿ ಕಾರ್ಮಿಕರಿಗೆ 2015-16 ನೇ ಸಾಲಿನ ಹಿಂಬಾಕಿ ತುಟ್ಟಿ ಭತ್ಯೆ ಪಾವತಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ನಿಯಮಾನುಸಾರ ಅಗತ್ಯ ಕ್ರಮ ವಹಿಸುವಂತೆ, ಇಲಾಖೆಯ ಕ್ಷೇತ್ರಾಧಿಕಾರಿಗಳಿಗೆ ದಿನಾಂಕ: 11-04-2023 ರಂದು ಸೂಚಿಸಲಾಗಿತ್ತು.<br><br>ಮುಂದುವರಿದು, ಮೆ: ಭಾರತ್ ಬೀಡಿ ವರ್ಕ್ಸ್ ಪ್ರೈ. ಲಿಮಿಟೆಡ್, ಮಂಗಳೂರು, ಇವರು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂ. 27186/ 2017 ಸಲ್ಲಿಸಿ, ಸರ್ಕಾರವು ದಿ: 02-01-2017 ರಂದು ಹೊರಡಿಸಿದ್ದ ಅಧಿಸೂಚನೆಯನ್ನು ರದ್ದುಗೊಳಿಸುವಂತೆ ಕೋರಿರುತ್ತಾರೆ. ಗೌರವಾನ್ವಿತ ನ್ಯಾಯಾಲಯವು ಸದರಿ ಪ್ರಕರಣದಲ್ಲಿ ದಿನಾಂಕ: 19-9-2023 ರಂದು ಹೊರಡಿಸಿರುವ ತೀರ್ಪಿನಲ್ಲಿ ದಿನಾಂಕ: 02-1-2017 ರ ಅಧಿಸೂಚನೆಯನ್ನು ವಜಾಗೊಳಿಸಿರುತ್ತದೆ.<br><br>ರಿಟ್ ಅರ್ಜಿ ಸಂಖ್ಯೆ: 11800/2019 ರಲ್ಲಿ ಗೌರವಾನ್ವಿತ ಉಚ್ಚ ನ್ಯಾಯಾಲಯವು ದಿನಾಂಕ: 2-1-2017 ರ ಸರ್ಕಾರದ ಅಧಿಸೂಚನೆ ಸೂಕ್ತವಾಗಿರುತ್ತದೆ ಎಂದು ಎತ್ತಿ ಹಿಡಿದಿದ್ದರೆ, ರಿಟ್ ಅರ್ಜಿ ಸಂಖ್ಯೆ: 27186/2017 ರಲ್ಲಿ ದಿನಾಂಕ: 19-9-2023 ರಂದು ಹೊರಡಿಸಿರುವ ತೀರ್ಪಿನಲ್ಲಿ ಅದೇ ಅಧಿಸೂಚನೆಯನ್ನು ವಜಾಗೊಳಿಸಿರುತ್ತದೆ. ಆದುದರಿಂದ ವಿ.ಡಿ.ಎ ಪಾವತಿಗೆ |

<table>
<tr>
<td></td>
<td></td>
<td>ಸಂಬಂಧಿಸಿದಂತೆ, ಗೌರವಾನ್ವಿತ ಉಚ್ಚ ನ್ಯಾಯಾಲಯವು ನೀಡಿರುವ ಎರಡೂ ತೀರ್ಪುಗಳು ವ್ಯತಿರಿಕ್ತವಾಗಿರುತ್ತವೆ.<br><br>ಮೇಲ್ಕಂಡ ಅಂಶಗಳ ಹಿನ್ನೆಲೆಯಲ್ಲಿ ರಿಟ್ ಅರ್ಜಿ ಸಂಖ್ಯೆ: 27186/2017 ರಲ್ಲಿ ದಿನಾಂಕ: 19-9-2023 ರಂದು ಹೊರಡಿಸಿರುವ ತೀರ್ಪನ್ನು ಪುನರ್ ಪರಿಶೀಲಿಸುವ ಸಲುವಾಗಿ ಪುನರ್ ಪರಿಶೀಲನಾ ಅರ್ಜಿ ಸಂ: 257/2024 ನ್ನು ಗೌರವಾನ್ವಿತ ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ಸಲ್ಲಿಸಲಾಗಿದ್ದು, ದಿನಾಂಕ: 03-06-2024 ರಂದು ಸರ್ಕಾರದ ಪರವಾಗಿ ಅಫಿಡವಿಟ್ ಸಲ್ಲಿಸಲಾಗಿದ್ದು, ಅಗತ್ಯ ಹಿಂಬಾಲಿಕಾ ಕ್ರಮ ಕೈಗೊಳ್ಳಲಾಗುತ್ತಿದೆ.</td>
</tr>
<tr>
<td>ಆ)</td>
<td>ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಬೀಡಿ ಕಾರ್ಮಿಕರು ತಮ್ಮ ಉದ್ಯೋಗವನ್ನು ಕಳೆದುಕೊಳ್ಳುತ್ತಿದ್ದು, ನಿರಾಶ್ರಿತರಾಗುತ್ತಿರುವ ಕಾರ್ಮಿಕರಿಗೆ ಪುನರ್ ಉದ್ಯೋಗ ನೀಡಲು ಸರ್ಕಾರ ಕ್ರಮಕೈಗೊಳ್ಳುವುದೇ; (ವಿವರ ನೀಡುವುದು)</td>
<td>ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಬೀಡಿ ಕಾರ್ಮಿಕರು ತಮ್ಮ ಉದ್ಯೋಗವನ್ನು ಕಳೆದುಕೊಳ್ಳುತ್ತಿದ್ದು, ನಿರಾಶ್ರಿತರಾಗು ತ್ತಿರುವ ಕಾರ್ಮಿಕರಿಗೆ ಪುನರ್ ಉದ್ಯೋಗ ನೀಡುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದೆ ಇರುವುದಿಲ್ಲ.</td>
</tr>
<tr>
<td>ಇ)</td>
<td>ರಾಜ್ಯದಲ್ಲಿ ಒಟ್ಟು ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು; (ವಿವರ ನೀಡುವುದು)</td>
<td>ರಾಜ್ಯದಲ್ಲಿರುವ ಬೀಡಿ ಕಾರ್ಮಿಕರ ಸಂಖ್ಯೆಗೆ ಸಂಬಂಧಿಸಿದಂತೆ ಇಲಾಖಾವತಿಯಿಂದ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ. ಆದ್ದರಿಂದ ನಿಖರವಾದ ಬೀಡಿ ಕಾರ್ಮಿಕರ ಸಂಖ್ಯೆ ಲಭ್ಯವಿರುವುದಿಲ್ಲ. ಆದರೆ ಕಾರ್ಮಿಕ ಇಲಾಖೆಯ ಅಧಿಕಾರಿಗಳು ಬೀಡಿ ಉದ್ದಿಮೆ/ಗುತ್ತಿಗೆದಾರರಿಂದ ಅವರ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಹಾಗೂ ಮನೆಯಲ್ಲಿ ಬೀಡಿ ಕಟ್ಟುವ ಕಾರ್ಮಿಕರ ಸಂಖ್ಯೆಗಳನ್ನು ಪಡೆದಿದ್ದು ಈ ಪ್ರಕಾರ ವಿವರ ಈ ಕೆಳಕಂಡಂತಿದೆ.
<table>
<tr><th>ಕ್ರ. ಸಂ.</th><th>ಜಿಲ್ಲೆ</th><th>ಕಾರ್ಮಿಕರ ಸಂಖ್ಯೆ</th></tr>
<tr><td>1</td><td>ಮೈಸೂರು</td><td>4859</td></tr>
<tr><td>2</td><td>ಮಂಡ್ಯ</td><td>1292</td></tr>
<tr><td>3</td><td>ಚಾಮರಾಜನಗರ</td><td>1315</td></tr>
<tr><td>4</td><td>ಯಾದಗಿರಿ</td><td>50</td></tr>
<tr><td>5</td><td>ದಾವಣಗೆರೆ</td><td>3999</td></tr>
<tr><td>6</td><td>ದಕ್ಷಿಣ ಕನ್ನಡ</td><td>66585</td></tr>
<tr><td>7</td><td>ಉಡುಪಿ</td><td>12889</td></tr>
<tr><td>8</td><td>ಕೋಲಾರ</td><td>214</td></tr>
<tr><td>9</td><td>ಚಿಕ್ಕಬಳ್ಳಾಪುರ</td><td>172</td></tr>
<tr><td>10</td><td>ಬೆಂಗಳೂರು ಗ್ರಾಮಾಂತರ</td><td>31</td></tr>
<tr><td>11</td><td>ತುಮಕೂರು</td><td>22989</td></tr>
<tr><td>12</td><td>ಮಧುಗಿರಿ</td><td>6565</td></tr>
</table>
</td>
</tr>
</table>

<table>
<tr>
<td></td>
<td></td>
<td>
<table>
<tr><td>13</td><td>ರಾಮನಗರ</td><td>201</td></tr>
<tr><td>14</td><td>ಬೆಳಗಾವಿ</td><td>148</td></tr>
<tr><td>15</td><td>ಧಾರವಾಡ</td><td>506</td></tr>
<tr><td>16</td><td>ಹಾವೇರಿ</td><td>592</td></tr>
<tr><td colspan="2">ಒಟ್ಟು</td><td>119707</td></tr>
</table>
ಅಲ್ಲದೆ, ಈ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವ ಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ಬೀಡಿ ಕಾರ್ಮಿಕರು ಸೇರಿದಂತೆ ಒಟ್ಟು 102 ವರ್ಗಗಳ ಕಾರ್ಮಿಕರನ್ನು ಉಚಿತವಾಗಿ ನೋಂದಾಯಿಸಿ ಗುರುತಿನ ಚೀಟಿ ನೀಡಲಾಗುತ್ತಿದ್ದು, ಮಂಡಳಿಯ ಆನ್-ಲೈನ್ ಪೋರ್ಟಲ್ (ksuwssb.karnataka.gov.in) 83.547 ಬೀಡಿ ಕಾರ್ಮಿಕರನ್ನು ಮತ್ತು ಕೇಂದ್ರ ಸರ್ಕಾರದ ಇ-ಶ್ರಮ್ ಪೋರ್ಟಲ್ ಮೂಲಕ ಈವರೆಗೆ ಒಟ್ಟು 1,06,160 ಬೀಡಿ ಕಾರ್ಮಿಕರು ಸೇರಿದಂತೆ ಒಟ್ಟು 1,89,707 ಕಾರ್ಮಿಕರನ್ನು ನೋಂದಾಯಿಸಿ, ಸ್ಮಾರ್ಟ್ ಕಾರ್ಡ್ ವಿತರಿಸಲಾಗಿದೆ.
</td>
</tr>
<tr>
<td>ಈ)</td>
<td>ಬೀಡಿ ಕಾರ್ಮಿಕರಿಗಾಗಿ ಯಾವ ಯಾವ ಸವಲತ್ತು ನೀಡಲಾಗಿದೆ; ಕೇಂದ್ರ ಮತ್ತು ರಾಜ್ಯ ಸರ್ಕಾರದ ನಿಲುವೇನು? (ವಿವರ ನೀಡುವುದು)</td>
<td>
ಬೀಡಿ ಕಾರ್ಮಿಕರಿಗಾಗಿ ಭಾರತ ಸರ್ಕಾರದ ಕಾರ್ಮಿಕ ಮತ್ತು ; ಉದ್ಯೋಗ ಮಂತ್ರಾಲಯದ ಅಧೀನದಲ್ಲಿ ಬರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ - 9 ಮತ್ತು ಉಡುಪಿ ಜಿಲ್ಲೆಯಲ್ಲಿ -3, ಆರೋಗ್ಯ ಘಟಕಗಳಿದ್ದು ಆರೋಗ್ಯದ ಸಮಸ್ಯೆಗಳಿಗೆ ಸದರಿ ಡಿಸ್ಪೆನ್ಸರಿಗಳಿಂದ ಚಿಕಿತ್ಸೆ ಪಡೆಯಬಹುದಾಗಿರುತ್ತದೆ. ಅಲ್ಲದೆ. ಇಎಸ್‌ಐ ಮತ್ತು ಪಿಎಫ್ ಸೌಲಭ್ಯವಿಲ್ಲದ ಬೀಡಿ ಕಾರ್ಮಿಕರು ಈ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ರಾಜ್ಯ ಸರ್ಕಾರದ ಯೋಜನೆಯಾದ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ಬೀಡಿ ಕಾರ್ಮಿಕರು ಸೇರಿದಂತೆ ಒಟ್ಟು 102 ವರ್ಗಗಳ ಕಾರ್ಮಿಕರನ್ನು ನೊಂದಾಯಿಸಿ ಸ್ಮಾರ್ಟ್ ಕಾರ್ಡ್‌ಗಳನ್ನು ಉಚಿತವಾಗಿ ನೀಡಲಾಗುತ್ತಿದ್ದು, ಈ ಯೋಜನೆಯಡಿ ನೀಡಲಾಗುತ್ತಿರುವ ಸೌಲಭ್ಯಗಳು ಈ ಕೆಳಕಂಡಂತಿದೆ:
ಸೌಲಭ್ಯಗಳು:
ಅ) ಅಪಘಾತ ಪರಿಹಾರ ಸೌಲಭ್ಯ:
<ul>
<li>ಅಪಘಾತದಿಂದ ಮರಣ ಹೊಂದಿದಲ್ಲಿ ಅವರ ನಾಮನಿರ್ದೇಶಿತರಿಗೆ ರೂ.1 ಲಕ್ಷ ಪರಿಹಾರ.</li>
<li>ಅಪಘಾತದಿಂದ ಶಾಶ್ವತ/ ಭಾಗಶಃ ದುರ್ಬಲತೆ ಹೊಂದಿದಲ್ಲಿ ರೂ.1.00 ಲಕ್ಷಗಳವರೆಗೆ ಪರಿಹಾರ (ಶೇಕಡವಾರು ದುರ್ಬಲತೆ ಆಧಾರದ ಮೇಲೆ).</li>
<li>ಆಸ್ಪತ್ರೆ ವೆಚ್ಚ ಮರುಪಾವತಿ ರೂ.50,000/-ಗಳವರೆಗೆ. (ಅಪಘಾತ ಪ್ರಕರಣಗಳಲ್ಲಿ ಮಾತ್ರ)</li>
</ul>
ಆ) ಸಹಜ ಮರಣ ಪರಿಹಾರ ಮತ್ತು ಅಂತ್ಯಕ್ರಿಯೆ ವೆಚ್ಚ: ಫಲಾನುಭವಿಯ ಕುಟುಂಬದವರಿಗೆ ಅಂತ್ಯಕ್ರಿಯೆ ವೆಚ್ಚಕ್ಕಾಗಿ ರೂ.10,000/-ಗಳ ಧನ ಸಹಾಯ.
</td>
</tr>
</table>

**ಸಂಖ್ಯೆ: LD 134 LWA 2026**

**(ಸಂತೋಷ್ ಎಸ್. ಲಾಡ್)**
**ಕಾರ್ಮಿಕ ಸಚಿವರು**